## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ

ಸಿಸಿ.219/2015

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀನಿವಾಸ್ | ಸಿಡಬ್ಲೂಃ **03** |
| ತಂದೆ/ಗಂಡನ ಹೆಸರು | ಃ | ರಾಮಾಚಾರ್ | ಪಿಡಬ್ಲೂಃ **02** |
| ವಯಸ್ಸು | ಃ | 51 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಖಾಸಗಿ ಕೆಲಸ | 26.12.2024 |
| ವಾಸ ಸ್ಥಳ | ಃ | ಜಂಗಮಕೋಟೆ | |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಚಾಸಾ.**1** ಮತ್ತು **2, 4** ರಿಂದ **10** ರವರ ಪರಿಚಯ ಇರುತ್ತದೆ. ನನಗೆ ಆರೋಪಿತರ ಪರಿಚಯ ಇದೆ. ದಿಃ**11.08.2014** ರಂದು ಬೆ.ಸು.**11.30** ಗಂಟೆ ಸಮಯದಲ್ಲಿ ನಮ್ಮ ವಿಧ್ಯಾ ಸಂಸ್ಥೆಯ ಆಯಾ ಆಗಿರುವ ಚಾ.ಸಾ.**5** ರವರು ಶಾಲೆಯಲ್ಲಿದ್ದಾಗ ಆರೋಪಿತರು ನಮ್ಮ ಜ್ಯೋತಿ ಆಂಗ್ಲ ಶಾಲೆಯ ಒಳಗಡೆ ಜೆ ಸಿ ಬಿ ಯಂತ್ರವನ್ನು ತೆಗೆದುಕೊಂಡು ಬಂದು ಜಾಗದ ಮಣ್ಣನ್ನು ಅಗೆಸುತ್ತಿದ್ದಾಗ ಚಾಸಾ.**5** ರವರು ಅದನ್ನು ಪ್ರಶ್ನಿಸಿದಾಗ ಆರೋಪಿತರು ಚಾ.ಸಾ.**5** ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ಚಾ.ಸಾ.**5** ರವರು ನಡೆದ ವಿಚಾರವನ್ನು ಚಾ.ಸಾ.**1** ರವರಿಗೆ ತಿಳಿಸಿದ್ದು ಆಗ ಚಾ,ಸಾ.**1** ರವರು ಸಹ ಆರೋಪಿತರ ಬಳಿ ಹೋಗಿ ನಮ್ಮ ಶಾಲೆಯ ಜಾಗವನ್ನು ಏಕೆ ಅಗೆಸುತ್ತಿದ್ದೀರಾ ಎಂದು ಪ್ರಶ್ನಿಸಿದಾಗ ಆರೋಪಿತರು ಚಾ.ಸಾ.**1** ರವರನ್ನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ನಾನು ಚಾ.ಸಾ.**2** ಹಾಗೂ ಚಾ.ಸಾ.**4** ರವರು ಹೋಗಿ ನೋಡಿದಾಗ ಒಂದು ಕಾರಿನ ಸಂಖ್ಯೆ ಕೆಎ**-53-**ಜಡ್**-4914** ಕಾರಿನಲ್ಲಿ **05** ಜನ ಬಂದಿದ್ದು ಅವರಲ್ಲಿ ಮೂರು ಜನ ಆರೋಪಿತರು ಶಾಲೆಯ ಕಾಂಪೌಂಡಿನೊಳಗೆ ಅತಿಕ್ರಮ ಪ್ರವೇಶ ಮಾಡಿದ್ದು ಉಳಿದ ಇಬ್ಬರು ಕಾರಿನ ಹತ್ತಿರ ಇದ್ದರು. ಸದರಿ ಆರೋಪಿತರನ್ನು ನಾನು ಚಾ.ಸಾ.**2** ಹಾಗೂ **4** ರವರು ಪ್ರಶ್ನೆ ಮಾಡಿದಾಗ ಆರೋಪಿತರು ನಮ್ಮೆಲ್ಲರಿಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಮಗೆ ದೇವನಹಳ್ಳಿಯಲ್ಲಿರುವ ರೌಡಿಗಳು ಪರಿಚಯ ಇರುತ್ತದೆ ಅವರಿಗೆ ಹೇಳಿ ನಿಮ್ಮನ್ನೆಲ್ಲಾ ಸಾಯಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿರತ್ತಾರೆ. ನಂತರ ಆರೋಪಿತರೆಲ್ಲರೂ ನಮ್ಮನ್ನು ಕೈಯಿಂದ ತಳ್ಳಿರುತ್ತಾರೆ. ನಂತರ ಸದರಿ ಗಲಾಟೆಯನ್ನು ಚಾ.ಸಾ.**6** ಮತ್ತು **7** ರವರು ಬಿಡಿಸಿರುತ್ತಾರೆ. ಘಟನಾ ಸಂಬಂದ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವೈ ಎ ಎಸ್ ವಕೀಲರಿಂದಃ**

ನಮ್ಮ ಶಾಲೆ ಪಕ್ಕದಲ್ಲಿ ಒಂದು ಲೇಔಟ್ ಇದೆ ಎಂದರೆ ಸಾಕ್ಷಿ ಜಮೀನು ಇದೆ ಎಂದು ಹೇಳುತ್ತಾರೆ. ಈಗ ಸದರಿ ಜಮೀನು ಲೇಔಟ್ ಆಗಿರುತ್ತದೆ. ಮೊದಲು ರಸ್ತೆ, ನಂತರ ಸ್ಮಶಾನ ಆದಾದ ನಂತರ ನಮ್ಮ ಶಾಲೆ ಬರುತ್ತದೆಂದರೆ ಸರಿಯಲ್ಲ. ನಮ್ಮ ಶಾಲೆಗೆ ಹಿಂಭಾಗದಲ್ಲಿ ರಸ್ತೆ ಇರುತ್ತದೆಂದರೆ ಸರಿಯಲ್ಲ ಸಾಕ್ಷಿ ಮುಂಭಾಗದಲ್ಲಿ ರಸ್ತೆ ಇರುತ್ತದೆಂದು ಹೇಳುತ್ತಾರೆ. ಶಾಲೆ ಹಿಂಭಾಗದಲ್ಲಿರುವ ರಸ್ತೆಯನ್ನು ಲೇ ಔಟಿನವರು ಓಡಾಡಲು ಬಿಟ್ಟುಕೊಂಡಿರುತ್ತಾರೆಂದರೆ ಸರಿಯಲ್ಲ. ಲೇಔಟ್ ಆಗುವ ಮುಂಚೆ ಜಮೀನಿಗೆ ಕಾಂಪೌಂಡನ್ನು ಹಾಕಿರಲಿಲ್ಲ ಎಂದರೆ ಸಾಕ್ಷಿ ಕಲ್ಲು ಕಂಬಗಳು ಇದ್ದವು ಎಂದು ಹೇಳುತ್ತಾರೆ. ಘಟನಾ ವರ್ಷದಲ್ಲಿ ಲೇಔಟಿನ ಜಾಗವನ್ನು ನಮ್ಮ ಶಾಲೆಯ ಮಕ್ಕಳು ಆಟವಾಡಲು ಉಪಯೋಗಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಶಾಲೆಯ ಮಕ್ಕಳು ಸದರಿ ಜಾಗವನ್ನು ಆಟವಾಡಲು ಉಪಯೋಗಿಸಿಕೊಳ್ಳುತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**2.** ನಮ್ಮ ಶಾಲೆಯ ಪಕ್ಕದಲ್ಲಿ ಒಂದು ಗ್ಯಾಸ್ ಗೋಡೌನ್ ಇತ್ತು ಎಂದರೆ ಸಾಕ್ಷಿ **2016** ರಲ್ಲಿ ಇತ್ತು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಘಟನೆ ನಡೆದ ಗ್ಯಾಸ್ ಗೋಡೌನ್ ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಗ್ಯಾಸ್ ಗೋಡೌನ್ ಶಾಲೆಗೆ ಸಂಬಂದಪಟ್ಟಿದ್ದು ಎಂದರೆ ಗೊಡೌನ್ ನಮ್ಮದೇ ಘಟನೆ ನಡೆದಾಗ ಗ್ಯಾಸ್ ಗೋಡೌನ್ ಇರಲಿಲ್ಲ ಎಂದು ಹೇಳುತ್ತಾರೆ. ಲೇಔಟ್ ನ ಜಾಗ ಆರೋಪಿತರದ್ದಾಗಿದ್ದು ಅವರು ಅದ್ದುಬಸ್ತನ್ನು ಮಾಡಿಕೊಂಡು ಕಾಂಪೌಂಡನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ಸದರಿ ಕಾಂಪೌಂಡನ್ನು ಹಾಕಿದ ನಂತರ ನಮ್ಮ ಶಾಲಾ ಮಕ್ಕಳಿಗೆ ಯಾವುದೇ ಆಟವಾಡಲು ಮೈದಾನ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಕಾಂಪೌಂಡನ್ನು ಹಾಕಿದ್ದರಿಂದ ನಮಗೂ ಹಾಗೂ ಆರೋಪಿತರಿಗೂ ವೈಮನಸ್ಯ ಇತ್ತು ಎಂದರೆ ಸರಿಯಲ್ಲ. ಆರೋಪಿತರ ಬಳಿ ನಾವು ಸದರಿ ಜಮೀನಿನ ಜಾಗವನ್ನು ಕಡಿಮೆ ಬೆಲೆಗೆ ಕೇಳಿದ್ದು ಅವರು ಅದನ್ನು ಮಾರಾಟ ಮಾಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಸೇರಿದ ಗ್ಯಾಸ್ ಗೋಡೌನ್ ಗೆ ಸಂಬಂದಪಟ್ಟಂತೆ ಒಂದು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಘಟನಾ ಸಮಯದಲ್ಲಿ ಗ್ಯಾಸ್ ಗೋಡೌನ್ ಇರಲಿಲ್ಲ ಎಂದು ಹೇಳುತ್ತಾರೆ. ಸರ್ಕಾರದಿಂದ ನೋಟೀಸು ಬಂದಾಗ ನಾವು ಗ್ಯಾಸ್ ಗೋಡೌನನ್ನು ಸ್ಥಳಾಂತರಿಸಿರುತ್ತೇವೆಂದರೆ ಸರಿಯಲ್ಲ.

**3.** ಗಲಾಟೆ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಚಾ.ಸಾ.**6** ಮತ್ತು **7** ರವರು ಇದ್ದರು ಇತರರನ್ನು ನಾನು ಗಮನಿಸಿರುವುದಿಲ್ಲ ಎಂದು ಹೇಳುತ್ತಾರೆ. ಚಾ.ಸಾ.**6** ಮತ್ತು **7** ನನ್ನ ಸ್ನೇಹಿತರು

ಎಂದರೆ ಸಾಕ್ಷಿ ನಮ್ಮ ಊರಿನವರು ಎಂದು ಹೇಳುತ್ತಾರೆ. ಶಾಲೆಯ ಬಳಿ **05** ಜನ ಬಂದಿದ್ದು ಅವರನ್ನು ಮೂರ ಜನ ಅರೋಪಿತರು ಮಾತ್ರ ಶಾಲೆಯ ಒಳಗಡೆ ಬಂದಿರುತ್ತಾರೆ ಯಾರು ಯಾರಿಗೆ ಬೈದಿರುತ್ತಾರೆಂದರೆ ಸಾಕ್ಷಿ ಮೂವರು ಆರೋಪಿತರು ನನಗೆ, ಚಾ.ಸಾ.**2**, **4** ಹಾಗೂ **5** ರವರಿಗೆ ಬೈದಿರುತ್ತಾರೆಂದು ಹೇಳುತ್ತಾರೆ. ನನ್ನನ್ನು ಮೂವರು ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನಗೆ ಆರೋಪಿತರು ಬಂದಿದ್ದ ಕಾರಿನ ನಂಬರನ್ನು ಹೊರತು ಪಡಿಸಿ, ಅದರ ಹೆಸರು ಮತ್ತು ಬಣ್ಣ ನೆನಪಿಲ್ಲ ಎಂದು ಹೇಳುತ್ತಾರೆ. ಆರೋಪಿತರನ್ನು ನಾನು ಇದೆ ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡಿರುತ್ತೇನೆಂದರೆ ಸರಿಯಲ್ಲ. ಗಲಾಟೆ ಆದಾಗ ಆರೋಪಿತರ ಹೆಸರು ನನಗೆ ತಿಳಿದಿರಲಿಲ್ಲ ಪೋಲೀಸ್ ಠಾಣೆಯಲ್ಲಿ ಅವರ ಹೆಸರು ತಿಳಿದು ಬಂದಿರುತ್ತದೆ.

**4.** ನಾನು ಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಮಾಲೀಕ ಎಂದರೆ ಸರಿಯಲ್ಲ, ಸಾಕ್ಷಿ ಕಾರ್ಯದರ್ಶಿ ಎಂದು ಹೇಳುತ್ತಾರೆ. ಯಾವುದೇ ಘಟನೆ ನಡೆದಿಲ್ಲ ಅರೋಪಿರು ಯಾರಿಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರಲ್ಲಿ ಮಧು ಎನ್ನುವ ಆರೋಪಿ ಯಾರು ಎಂದರೆ ಸಾಕ್ಷಿ ಘಟನೆ ನಡೆದು **10** ವರ್ಷಗಳಾಗಿರುವುದರಿಂದ ಹಾಗೂ ನನಗೆ ಆರೋಪಿತರ ಹೆಸರುಗಳು ಮಾತ್ರ ತಿಳಿದಿರುತ್ತದೆಂದು ಹೇಳುತ್ತಾರೆ . ಮೂವರು ಆರೋಪಿತರ ಹೆಸರುಗಳನ್ನು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಆದರೆ ಮೂವರು ಆರೋಪಿತರು ಇವರೇ ಎಂದು ಹೇಳುತ್ತಾರೆ. ನಾನು ಮೂವರು ಆರೋಪಿತರನ್ನು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಆರೋಪಿತರ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿರುವ ಹೆಸರುಗಳನ್ನು ನೋಡಿಕೊಂಡು ಆರೋಪಿತರ ಮೇಲೆ ಸುಳ್ಳು ಪ್ರಕರಣದ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಚಾ.ಸಾ.**2** ಮತ್ತು **4** ರವರನ್ನು ಕೈಯಿಂದ ತಳ್ಳಿರುವುದಿಲ್ಲ ಎಂದರೆ ಸರಿಯಲ್ಲ. ಜಮಿನನ್ನು ಕಡಿಮೆ ಬೇಲೆಗೆ ತೆಗೆದುಕೊಳ್ಳುವ ಸಲುವಾಗಿ ಸುಳ್ಳುಪ್ರಕರಣವನ್ನು ದಾಖಲಿಸಿದ್ದೇವೆಂದರೆ ಸರಿಯಲ್ಲ.

**5.** ನಾನು ಜಂಗಮಕೋಟೆ ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದೆ ಎಂದರೆ ಸಾಕ್ಷಿ ನಾನು ಘಟನೆ ನಡೆದಾಗ ಅಧ್ಯಕ್ಷನಾಗಿರಲಿಲ್ಲ **2021** ರಲ್ಲಿ ಆಗಿದ್ದೆ ಎಂದು ಹೇಳುತ್ತಾರೆ. ನಾನು ಊರಿನಲ್ಲಿ ರಾಜಕೀಯ ಮುಖಂಡ ಎಂದರೆ ಸರಿಯಲ್ಲ. ಗಲಾಟೆ ಆದ ನಂತರ ಪೋಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಮ್ಮ ಶಾಲೆಗೂ ಪೋಲಿಸ್ ಠಾಣೆಗೂ **200** ಮೀಟರ್ ಅಂತರ ಇರುತ್ತದೆಂದರೆ ಸರಿ. ಸದರಿ ಪೋಲೀಸ್ ಠಾಣೆಗೆ

ನಾವು ದೂರನ್ನು ನೀಡಲು ಹೋದಾಗ ಪೋಲೀಸರನ್ನು ನಮ್ಮನ್ನು ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆಗೆ ಕಳುಹಿಸಿರುತ್ತಾರೆ. ಪೋಲೀಸ್ ಠಾಣೆಗೆ ದೂರನ್ನು ನೀಡಲು ನಾನು ಹೋಗಿರಲಿಲ್ಲ. ಪೋಲೀಸರು ಘಟನಾ ಸ್ಥಳಕ್ಕೆ ಎಷ್ಟು ಸಮಯಕ್ಕೆ ಬಂದರು ಎಂದರೆ ನನಗೆ ಈಗ ನೆನಪಿಲ್ಲ. ಚಾ.ಸಾ.5 ರವರು ಈಗ 2-3 ವರ್ಷಗಳಿಂದ ನಮ್ಮ ಶಾಲೆಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಪೋಲೀಸರಿಗೆ ದಿ:29.08.2014 ರಲ್ಲಿ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಅವರ ಜಾಗಕ್ಕೆ ಕಾಂಪೌಂಡನ್ನು ನಿರ್ಮಿಸಿಕೊಂಡಿದ್ದರಿಂದ ನಾನು ಆರೋಪಿತರ ಮೇಲೆ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.